## ಕನ್ನಡ ಭಾಷೆ

- ಗಗನ್ ಆರ್ ಮೈಲೇಶ್ವರ್

ಈ ಭಾಷೆಯ ಅಂದ ಬಲುಚಂದ,

ಇದು ಕನ್ನಡಾಂಬೆಯ ಕಂದ.

ಉತ್ತರದ ಮಂದಿಯ ಕನ್ನಡ,

ಕರಿ ಮಣ್ಣಿನ ಸುಗಂಧ.

ದಕ್ಷಿಣ ಮಕ್ಕಳ ಕನ್ನಡ

ಶ್ರೀ ಗಂಧದ ಸುಗಂಧ.

ಹುಟ್ಟಿದ್ದು ಸಾವಿರಾರು ವರ್ಷಗಳ ಹಿಂದೆ,

ಬೆಳೆಸಿದ್ದು ಹಲವಾರು ರಾಜ ವಂಶಗಳ,

ಉಳಿಸಿದ್ದು ಕನ್ನಡದ ಸಂಸ್ಕೃತಿಯನ್ನು,

ಪಸರಿಸಿದ್ದು ಕನ್ನಡಿಗರ ಕನ್ನಡತನವನ್ನು.

ಇದು ಪುರಾತನ, ಇದು ಸನಾತನ,

ಇದು ಸುಂದರ, ಇದು ನಿರಂತರ,

ಇದುವೇ ಚಂದದ ಅಂದದ ಕನ್ನಡ ಭಾಷೆ.